ಓ.ಎಸ್. ನಂಃ **39/2024**
ಪಿ ಡಬ್ಲ್ಯೂಃ **1**

ದಿನಾಂಕಃ 24-07-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ರಿಂದ 3, 5 ಹಾಗೂ 6 ನೇ ಪ್ರತಿವಾದಿಯರ ಪರ ಶ್ರೀ ಎಸ್.ಬಿ.ಪಿ ವಕೀಲರಿಂದಃ**

ನಿಮ್ಮ ಮದುವೆ ಎಷ್ಟು ವರುಷಗಳ ಹಿಂದೆ ಆಗಿದೆ ಎಂದರೆ ಸಾಕ್ಷಿಯು ನಾನು ಓದಿಲ್ಲ ಹಾಗಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಿನ ನನ್ನೊಂದಿಗೆ ನನ್ನ ಗಂಡ ಬಂದಿಲ್ಲ, ಆತ ತನ್ನ ತಾಯಿಯೊಂದಿಗೆ ಇರುತ್ತಾನೆ. 3 ನೇ ಪ್ರತಿವಾದಿ ನನ್ನ ಗಂಡನಾದ 4 ನೇ ಪ್ರತಿವಾದಿಯ ಅಣ್ಣನಾಗಿರುತ್ತಾನೆ. 2 ಮತ್ತು 5 ನೇ ಪ್ರತಿವಾದಿಯರು ನನ್ನ ಗಂಡನ ಸಹೋದರಿಯರಾಗಿರುತ್ತಾರೆ. 1 ನೇ ಪ್ರತಿವಾದಿ ನನ್ನ ಅತ್ತೆ ಆಗಿರುತ್ತಾರೆ ಎಂದರೆ ಸರಿ. ನಿಮ್ಮ ಮಾವ ತಾಯಪ್ಪ ತೀರಿಕೊಂಡು ಎಷ್ಟು ವರುಷಗಳು ಆಗಿದೆ ಎಂದರೆ ನಾನು ಓದಿಲ್ಲ ಹಾಗಾಗಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

2. ಎಷ್ಟು ಹೊಲಗಳ ಮೇಲೆ ದಾಖಲು ಮಾಡಿದ್ದೀರಿ ಎಂದರೆ ಸಾಕ್ಷಿಯು ನನ್ನ ಮಾವನಿಗೆ ಸೇರಿದ ಎಂಟುವರೆ ಎಕರೆ ಜಮೀನಿಗೆ ಸಂಬಂಧಿಸಿದಂತೆ ದಾವೆ ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ. ಎಂಟುವರೆ ಎಕರೆ ಒಂದೇ ಕಡೆ ಇರುವುದಿಲ್ಲ, ಬೇರೆ ಬೇರೆ ಕಡೆ ಇರುತ್ತದೆ. ಸದರಿ ಎಂಟುವರೆ ಜಮೀನು ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಎಲ್ಲಾ ಹಿರಿಯರ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಹಿರಿಯರ ಆಸ್ತಿ ಎಂದರೆ ಯಾರಿಗೆ ಸೇರಿದ್ದು ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಗಂಡನ ತಾತ ಹಣಮಂತ ರವರಿಗೆ ಸೇರಿದ್ದು ಆಗಿತ್ತು ಎಂದು ನುಡಿಯುತ್ತಾರೆ. ಸದರಿ ಹಣಮಂತರವರನ್ನು ನಾನು ನೋಡಿದ್ದೇನೆ. ಸದರಿ ಹಣಮಂತರವರ ಹೆಂಡತಿ ಹೆಸರು ಗೆಜಲಮ್ಮ ಎಂದು ಇರುತ್ತದೆ.

3. ನನ್ನ ಮಾವ ತಾಯಪ್ಪರವರು ಸೇರಿದಂತೆ ಅವರು ಒಟ್ಟು ಮೂರು ಜನ ಸಹೋದರರು ಇದ್ದರು. ಸದರಿ ಮೂರು ಜನ ಈಗ ಜೀವಂತ ಇಲ್ಲ ಎಂದರೆ ಸರಿ. ನನ್ನ ಮಾವನ ಇಬ್ಬರು ಸಹೋದರರ ಪೈಕಿ ಭೀಮಪ್ಪ ಎಂಬುವವರ ಹೆಸರು ಮಾತ್ರ ನನಗೆ ಗೊತ್ತು, ಇನ್ನೊಬ್ಬರ ಹೆಸರು ನನಗೆ ಗೊತ್ತಿಲ್ಲ. ಆತನ ಸಹೋದರರ ಹೆಸರು ಸಣ್ಣ ಭೀಮಪ್ಪ

ಮತ್ತು ದೊಡ್ಡ ಭೀಮಪ್ಪ ಎಂದು ಇರುತ್ತದೆ ಎಂದರೆ ಸರಿ. ಸದರಿ ಮೂರು ಜನ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಎಲ್ಲಾ ದಾವಾ ಆಸ್ತಿಗಳು ಹಿರಿಯರ ಆಸ್ತಿಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ.

4. 6 ನೇ ಪ್ರತಿವಾದಿ ನಿಮ್ಮ ಮಾವನ ಕಡೆಯಿಂದ ಆಸ್ತಿ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನನ್ನ ಮಾವ ಖರೀದಿ ಪತ್ರ ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಹಾಗಾದರೆ 6 ನೇ ಪ್ರತಿವಾದಿಯನ್ನು ಯಾಕೇ ಪಕ್ಷಗಾರರನ್ನಾಗಿ ಮಾಡಿದ್ದೀರಿ ಎಂದರೆ ಸಾಕ್ಷಿಯು ನನ್ನ ಅತ್ತೆ 1 ನೇ ಪ್ರತಿವಾದಿ ನನಗೆ ಹೇಳದೇ ಕೇಳದೇ 6 ನೇ ಪ್ರತಿವಾದಿ ಆಸ್ತಿ ಮಾರಾಟ ಮಾಡಿರುವುದರಿಂದ ಅವರನ್ನು ದಾವೆಯಲ್ಲಿ ಸೇರಿಸಿದ್ದೇವೆ ಎಂದು ನುಡಿಯುತ್ತಾರೆ. ನಿಮ್ಮ ಅತ್ತೆ ಯಾವಾಗ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಂದಾಜು ಎಷ್ಟು ವರುಷಗಳ ಹಿಂದೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು 20 ವರುಷಗಳ ಹಿಂದೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಅತ್ತೆ ಈ ವರೆಗೆ ಯಾವುದೇ ಆಸ್ತಿ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮಾವ ದಿನಾಂಕ 03.05.2016 ರಂದು ಸರ್ವೆ ನಂ.71 ರಲ್ಲಿನ 02 ಎಕರೆ 05 ಗುಂಟೆ ಜಮೀನನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರ 6 ನೇ ಪ್ರತಿವಾದಿ ತನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಿಕೊಂಡು ಖರೀದಿಸಿದ ಜಮೀನು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ಮಾವ ತಾಯಪ್ಪ ತಾನು ಖರೀದಿಸಿದ ಆಸ್ತಿಯನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹಿರಿಯರ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ.

5. ನನ್ನ ಮಾವ ತಾಯಪ್ಪ ಹಾಗೂ ಅವರ ಹೆಂಡತಿ 1 ನೇ ಪ್ರತಿವಾದಿ ಮುಂಬೈಯಲ್ಲಿ ವಾಸವಾಗಿದ್ದು, ಅಲ್ಲಿ ದುಡಿಯುತ್ತಿದ್ದರು ಎಂದರೆ ಸರಿ. ನಂತರ ದಿನಾಂಕ 17.04.1997 ರಂದು ನಿಮ್ಮ ಮಾವ ಸರ್ವೆ ನಂ.71/1 ರಲ್ಲಿನ 02 ಎಕರೆ 22 ಗುಂಟೆ ಹಾಗೂ ಸರ್ವೆ ನಂ.84/2 ರಲ್ಲಿನ 01 ಎಕರೆ 12 ಗುಂಟೆ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವುಗಳು ಹಿರಿಯರ ಅಸ್ತಿ ಆಗಿರುತ್ತವೆ ಎಂದು

ನುಡಿಯುತ್ತಾರೆ. ಆ ನಂತರ ನಿಮ್ಮ ಮಾವ ಸರ್ವೆ ನಂ.128 ರಲ್ಲಿನ 20 ಗುಂಟೆ ಜಮೀನನ್ನು ದಿಃ 02.06.1990 ರಂದು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದು ಹಿರಿಯರ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಎಲ್ಲಾ ದಾವಾ ಆಸ್ತಿಗಳು ಹಿರಿಯರ ಆಸ್ತಿಗಳು ಆಗಿರುತ್ತವೆ ಎಂದು ಸುಳ್ಳು ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ.

6. ನಿಮ್ಮ ಗಂಡ 4 ನೇ ಪ್ರತಿವಾದಿ ಈ ಹಿಂದೆ ಅಸಲು ದಾವಾ ನಂ.52/2019 ರಲ್ಲಿ ಈ ದಾವೆಯ 3 ನೇ ಪ್ರತಿವಾದಿ ಹಾಗೂ ತಮ್ಮ ತಂದೆ ತಾಯಪ್ಪ ರವರ ವಿರುದ್ಧ ಇದೇ ನ್ಯಾಯಾಲಯದಲ್ಲಿ ದಾವೆ ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ ಎಂದು ಸದರಿ ದಾವೆಯನ್ನು ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯಕ್ಕೆ ವರ್ಗಾಯಿಸಿದ್ದು, ದಾವಾ ನಂ.11/2021 ರಂದು ಮರು ಸಂಖ್ಯೆ ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಸುಳ್ಳು ದಾವೆ ಆಗಿದ್ದರಿಂದ ನನ್ನ ಗಂಡನ ದಿನಾಂಕ 22.03.2022 ರಂದು ಅದನ್ನು ಹಿಂದಕ್ಕೆ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಹಿಂದೆ ನೀವು ಈ ನ್ಯಾಯಾಲಯದಲ್ಲಿ ಅಸಲು ದಾವಾ ನಂ.5/2022 ರಲ್ಲಿ ಪಾಲು ವಿಭಾಗಕ್ಕಾಗಿ ದಾವೆ ದಾಖಲು ಮಾಡಿದ್ದೀರಿ ಎಂದರೆ ಸಾಕ್ಷಿಯು ಸರಿಯಲ್ಲ, ಪ್ರಸ್ತುತ ದಾವೆ ಒಂದನ್ನು ಮಾತ್ರ ದಾಖಲಿಸಿದ್ದೆನು ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ಈ ದಾವೆಯ 1 ರಿಂದ 5 ನೇ ಪ್ರತಿವಾದಿಯರ ವಿರುದ್ಧ ದಾಖಲು ಮಾಡಿದ್ದೀರಿ ಎಂದರೆ ಸಾಕ್ಷಿಯು ಆಗ ಅವರುಗಳು ನಮಗೆ ಪಾಲು ಕೊಡುತ್ತೇನೆ ಎಂದು ಹೇಳಿದ್ದರಿಂದ ನಾನು ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ, ಆದರೆ ನಂತರ ಪಾಲು ಕೊಡದ ಕಾರಣ ಈ ದಾವೆ ದಾಖಲು ಮಾಡಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಅತ್ತೆ 1 ನೇ ಪ್ರತಿವಾದಿ ನನಗೆ ಪಾಲು ಕೊಡುವುದಾಗಿ ತಿಳಿಸಿದ್ದರು. ಆ ರೀತಿ ನಮಗೆ ಊರಲ್ಲಿ ತಿಳಿಸಿದ್ದರು. ಯಾವಾಗ ತಿಳಿಸಿದ್ದರು ಎಂದರೆ ಸಾಕ್ಷಿಯು ನನಗೆ ದಿನಾಂಕ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ದಾವಾ ನಂ.5/2022 ರಲ್ಲಿ ತಮ್ಮ ಪ್ರತಿವಾದ ಪತ್ರ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನಾನು ಹಿಂದೆ ದಾವೆ ದಾಖಲು ಮಾಡಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆ ಸಹ ಸುಳ್ಳು ದಾವೆ ಆಗಿದ್ದರಿಂದ ನಾನು ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ ಆದ್ದರಿಂದ ದಿಃ 06.04.2024 ರಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನ್ನ ಗಂಡ 4 ನೇ

ಪ್ರತಿವಾದಿ ಹಾಜರಾಗಿ ದಾವಾ ಆಸ್ತಿಗಳು ಜಂಟಿ ಆಸ್ತಿಗಳಾಗಿರುತ್ತವೆ ಎಂದು ಘೋಷಣೆ ಮಾಡುವಂತೆ ಪರಿಹಾರ ಕೋರಿ ಪ್ರತೀ ದಾವೆ (Counter Claim) ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನಂತರ ನಿಮ್ಮ ಗಂಡ ಸಹ ಹಾಜರಾಗಿ ಸಾಕ್ಷ ವಿಚಾರಣೆ ಮಾಡಿಸದ ಕಾರಣ ಪ್ರತಿ ದಾವೆಯು ಸಹ ವಜಾ ಅಗಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆ ವಜಾ ಅದ ನಂತರ ನೀವು ಈ ದಾವೆ ದಾಖಲು ಮಾಡಿದ್ದೀರಿ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ಈ ದಾವೆ ದಾಖಲಿಸಲು ನನಗೆ ಯಾವುದೇ ಅಧಿಕಾರ ಹಾಗೂ ಹಕ್ಕು ಇಲ್ಲ ಎಂದರೆ ಸರಿಯಲ್ಲ.

7. ನನ್ನ ಗಂಡನ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ನಿಮ್ಮ ಗಂಡ ಸಲ್ಲಿಸಿದ ದಾವೆ ವಜಾ ಆಗಿರುವುದರಿಂದ ನಿಮಗೆ ದಾವಾ ಅಸ್ತಿಗಳಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸಾಕ್ಷಿಯು ಅವರು ಏನು ಮಾಡಿದ್ದಾರೆ ನನಗೆ ಗೊತ್ತಿಲ್ಲ, ನನ್ನ ಮಕ್ಕಳಿಗೆ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಹಿರಿಯರ ಆಸ್ತಿಗಳು ಆಗಿರುವುದಿಲ್ಲ ಆದ್ದರಿಂದ ವಾದಿಯರಿಗೆ ಹಿಸ್ಸಾ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಈ ಹಿಂದೆ ನೀವು ಹಾಗೂ ನಿಮ್ಮ ಗಂಡ ದಾಖಲಿಸಿದ್ದ ದಾವೆಗಳಲ್ಲಿ 6 ನೇ ಪ್ರತಿವಾದಿಯನ್ನು ಸೇರಿಸಿರಲ್ಲಿ ಎಂದರೆ ಸಾಕ್ಷಿಯು ಅವರು ಏನು ಮಾಡಿದ್ದರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

8. ನನ್ನ ಮಾವನಿಗೆ ಕ್ಯಾನ್ಸರ್ ಆಗಿತ್ತು ಎಂದರೆ ಸರಿ. ಅವರು ಬಹಳ ವರುಷಗಳ ಕಾಲ ಅನಾರೋಗ್ಯದಿಂದ ಬಳಲುದ್ದಿರು ಎಂದರೆ ಸರಿ. ಅವರ ಚಿಕಿತ್ಸೆಗೆ ಸಾಕಷ್ಟು ಹಣ ಖರ್ಚಾಗಿದೆ ಎಂದರೆ ಸಾಕ್ಷಿಯು ಅಷ್ಟೊಂದು ಖರ್ಚಾಗಿಲ್ಲ ಎಂದು ನುಡಿಯುತ್ತಾರೆ. ನೀವು ಅವರಿಗೆ ಚಿಕಿತ್ಸೆಗೆ ಹಣ ನೀಡಿಲ್ಲ ಎಂದರೆ ಸಾಕ್ಷಿಯು ನಾನು ಸಹ ಹಣ ಕೊಟ್ಟಿದ್ದೆನು ಎಂದು ನುಡಿಯುತ್ತಾರೆ. ನಾನು ಆಸ್ಪತ್ರೆಯ ಚಿಕಿತ್ಸೆಗೆ ನನ್ನ ಮಾವನ ಕೈಯಲ್ಲಿ ಹಣ ಕೊಟ್ಟಿದ್ದೆನು. ಎಷ್ಟು ಹಣ ನೀಡಿದ್ದೀರಿ ಎಂದರೆ ಸಾಕ್ಷಿಯು ಲೆಕ್ಕ ಮಾಡಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಹಣ ನೀಡಿರುವ ಬಗ್ಗೆ ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿ. ನಾನು ನನ್ನ ಮಾವನಿಗೆ ಯಾವುದೇ ಚಿಕಿತ್ಸೆ ಕೋಡಿಸದಿದ್ದರೂ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮಾವನಿಗೆ ಚಿಕಿತ್ಸೆಗೆ ಯಾರು ಹಣ ನೀಡದ ಕಾರಣ ಆತ 6 ನೇ ಪ್ರತಿವಾದಿಗೆ ಜಮೀನು

ಮಾರಾಟ ಮಾಡಿ ಬಂದ ಹಣದಿಂದ ಚಿಕಿತ್ಸೆ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಹಣ ಸಹ ಚಿಕಿತ್ಸೆಗೆ ಸಾಲದೆ ಆತ ಮರಣಹೊಂದಿರುತ್ತಾನೆ ಎಂದರೆ ಸರಿಯಲ್ಲ. ಆತನ ಚಿಕಿತ್ಸೆಗೆ ನಾನು ಅಥವಾ 1 ರಿಂದ 5 ನೇ ಪ್ರತಿವಾದಿಯರು ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ.

9. ನನ್ನ ಮಾವ ತೀರಿಕೊಂಡ ನಂತರ ಆಸ್ತಿಗಳ ಹಕ್ಕು ಬದಲಾವಣೆ 1 ನೇ ಪ್ರತಿವಾದಿಯ ಹೆಸರಿಗೆ ಆಗಿತ್ತು ಎಂದರೆ ಸರಿ. ಸದರಿ ಹಕ್ಕು ಬದಲಾವಣೆಯನ್ನು ನೀವು ಅಥವಾ 2 ರಿಂದ 5 ನೇ ಪ್ರತಿವಾದಿಯರು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ಅವರು ಏನು ಮಾಡಿದ್ದಾರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹಾಗೂ 4 ನೇ ಪ್ರತಿವಾದಿ ನಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಿಸಿಕೊಡುವಂತೆ 1 ನೇ ಪ್ರತಿವಾದಿಗೆ ಹೊಡಿ-ಬಡಿ ಮಾಡಿ ಕಿರುಕುಳ ನೀಡಿ ಅವರನ್ನು ಮನೆಯಲ್ಲಿ ಕೂಡಿ ಹಾಕಿದ್ದೆವು ಎಂದರೆ ಸರಿಯಲ್ಲ. ಆದ್ದರಿಂದ ನಿಮ್ಮ ಹಾಗೂ ನಿಮ್ಮ ಗಂಡನ ವಿರುದ್ಧ ಪ್ರಕರಣ ದಾಖಲಾಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ನಾನು ನನ್ನ ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸವಾಗಿದ್ದೆವು ಎಂದು ನುಡಿಯುತ್ತಾರೆ. ಸದರಿ ಪ್ರಕರಣದ ವಿಚಾರಣೆಗೆ ನೀವು ಹಾಗೂ ನಿಮ್ಮ ಗಂಡ ಹೆಚ್ಚುವರಿ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಹಾಜರಾಗುತ್ತಿದ್ದೀರಿ ಎಂದರೆ ಸಾಕ್ಷಿಯ ಇಲ್ಲ ಎಂದು ನುಡಿಯುತ್ತಾರೆ. ನಾನು ಹಾಗೂ 4 ನೇ ಪ್ರತಿವಾದಿ ಮಕ್ಕಳೊಂದಿಗೆ ಒಂದೇ ಮನೆಯಲ್ಲಿ ವಾಸವಾಗಿದ್ದೀರಿ ಎಂದರೆ ಸಾಕ್ಷಿಯು ಸರಿಯಲ್ಲ, ಆತ ತನ್ನ ಅಕ್ಕ-ತಂಗಿಯರು ಮತ್ತು ತಾಯಿಯೊಂದಿಗೆ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ಆ ರೀತಿ ದಾವೆಯಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಿನವೂ ಸಹ ನಾನು 4 ನೇ ಪ್ರತಿವಾದಿಯೆಂದಿಗೆ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈಗ 1, 2 ಮತ್ತು 5 ನೇ ಪ್ರತಿವಾದಿಯರು ಮುಂಬೈಯಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಊರಿಗೆ ಹೋಗುವುದು-ಬರುವುದು ಮಾಡುತ್ತಾರೆ ಎಂದು ನುಡಿಯುತ್ತಾರೆ. ಈಗಲೂ ಹಾಗೂ 4 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಮಕ್ಕಳೊಂದಿಗೆ ಪಕ್ಕದವರ ಮನೆಯಲ್ಲಿ ವಾಸವಾಗಿದ್ದೇನೆ ಎಂದು ನುಡಿಯುತ್ತಾರೆ. ಸದರಿ ನಾನು ವಾಸವಾಗಿರುವ ಮನೆ ಯಾರಿಗೇ ಸೇರಿದ್ದು

ಆಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ನಾವು ನಮ್ಮ ಅತ್ತೆ ಮಾವನ ಮನೆಯಲ್ಲಿಯೇ ವಾಸವಾಗಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ